
# ನೀರ ನಾಯಕಿ... ಸೂಕಿ!



ಪ್ರವೀಣ ಕುಲಕರ್ಣಿ

ನಮ್ಮ ಬೆಂಗಳೂರು ಆಗಿರಬಹುದು ಅಥವಾ ಹುಬ್ಬಳ್ಳಿ, ಕಲಬುರಗಿ, ಮೈಸೂರು, ಮಂಗಳೂರು, ಬೆಳಗಾವಿ ಇಲ್ಲವೆ ಇನ್ನು ಯಾವುದೇ ನಗರ ಆಗಿರಬಹುದು. ಈ ನಗರಗಳಲ್ಲಿ ಕುಡಿಯುವ ನೀರು ಪೂರೈಕೆಯ ಕೊಳವೆಯಿಂದ ನೀರು ಸೋರಿಕೆಯಾಗದಂತಹ ಒಂದಾದರೂ ಬಡಾವಣೆ ಸಿಗಬಹುದೇ? ಜಗತ್ತಿನ ಅತಿದೊಡ್ಡ ನೀರಿನ ಸಂಕಷ್ಟ ಎದುರಿಸಿದ ಚಿಲಿ ದೇಶದ ರಾಜಧಾನಿ ಸ್ಯಾಂಟಿಯಾಗೊದಲ್ಲೂ ಎರಡು ದಶಕಗಳ ಹಿಂದೆ ಹೀಗೇ ನೀರು ಸೋರಿಕೆ ಆಗುತ್ತಿತ್ತು. ಆ ನಗರದ ಸ್ಥಳೀಯ ಆಡಳಿತ ಒಂದಿಷ್ಟು ನೀರು ಸೋರಿಕೆಯಾದರೆ ಏನು ಮಹಾ ಎಂಬ ಉದಾಸೀನ ಭಾವದಲ್ಲಿ ಸುಮ್ಮನಿತ್ತು. ಯಾವಾಗ ನೀರಿನ ಅಭಾವ ತೀವ್ರವಾಗಿ ಕಾಡತೊಡಗಿತೊ ಆಗ 'ಜಲ ಸಂರಕ್ಷಣೆ' ಕುರಿತು ದೊಡ್ಡದಾಗಿಯೇ ಆ ನಗರ ಯೋಚಿಸತೊಡಗಿತು. ಹತ್ತು–ಹಲವು ಉಪಕ್ರಮಗಳಿಗೂ ಮುಂದಾಯಿತು. ಹೀಗೆ ಸ್ಯಾಂಟಿಯಾಗೊ ನೇಮಿಸಿಕೊಂಡ ಜಲಯೋಧರಲ್ಲಿ ಈ ಸೂಕಿ ಕೂಡ ಒಬ್ಬಳು. ಅಂದಹಾಗೆ, ಇವಳೊಬ್ಬಳು ಶ್ವಾನಿಣಿ.

ದಿನ ಬೆಳಗಾದರೆ ಸಾಕು, ಈ ಸೂಕಿಗೆ ಸ್ಯಾಂಟಿಯಾಗೊದ ಬೀದಿ ಬೀದಿಯನ್ನು ಸುತ್ತುವ ಕೆಲಸ. ಹಾಗೆ ಬೀದಿಯುದ್ದಕ್ಕೂ ಮೆರವಣಿಗೆ ನಡೆಯುವಾಗ ನೆಲ ಮೂಸುತ್ತಾ ಹೋಗುವುದು ಇವಳ ಹವ್ಯಾಸ. ನೆಲದಡಿಯ ನೀರು ಪೂರೈಕೆ ಪೈಪು ಎಲ್ಲಿಯಾದರೂ ಸೋರುತ್ತಿದ್ದರೆ ವಾಸನೆಯಿಂದಲೇ ಸೂಕಿ ಕಂಡುಹಿಡಿಯುತ್ತಾಳಂತೆ! ಸ್ಥಳೀಯ ಆಡಳಿತದ ಸಿಬ್ಬಂದಿ ತಕ್ಷಣ ರಿಪೇರಿ ಮಾಡಿ, ಸೋರಿಕೆಯನ್ನು ತಡೆಗಟ್ಟುತ್ತಾರೆ. ಹೀಗಾಗಿ ಲಕ್ಷಾಂತರ ಲೀಟರ್ ನೀರು ಪೋಲಾಗುವುದನ್ನು ತಪ್ಪಿಸಿದ ಶ್ರೇಯ ಸೂಕಿಯದ್ದಾಗಿದೆ.

'ಹದಿನೈದು ವರ್ಷಗಳ ಮಹಾನ್ ಬರ ಸರ್ ನಾವು ಅನುಭವಿಸಿದ್ದು. ನೀರಿನ ತೀವ್ರ ಅಭಾವ ನಮಗೆ ಒಳ್ಳೆಯ ಪಾಠ ಕಲಿಸಿದೆ. ಹೀಗಾಗಿ ಈಗ ಹನಿ ನೀರನ್ನೂ ವ್ಯರ್ಥಮಾಡಲು ಮನಸ್ಸು ಒಪ್ಪುವುದಿಲ್ಲ. ಸೂಕಿಯ ನೆರವಿನಿಂದ ನಗರದಾದ್ಯಂತ ನೀರಿನ ಸೋರಿಕೆ ತಡೆಗಟ್ಟಲು ನಮಗೆ ಸಾಧ್ಯವಾಗಿದೆ' ಎಂದು ಸ್ಥಳೀಯ ಅಧಿಕಾರಿಗಳು ಹೇಳುತ್ತಾರೆ.

ಸೂಕಿಯ ತರಬೇತುದಾರ ಸೆಬಾಸ್ಟಿಯನ್ ಮ್ಯಾಗ್ನೇರ್ ಅವರು ಹೇಳುವ ಪ್ರಕಾರ, ನೆಲದಡಿಯ ನೀರು ಸೋರಿಕೆಯನ್ನು ಪತ್ತೆ ಹಚ್ಚುವ ಕೌಶಲ ಕರಗತ ಮಾಡಿಕೊಳ್ಳಲು ಈ ಶ್ವಾನಿಣಿಗೆ ಆರು ತಿಂಗಳು ಸಾಕಾಯಿತಂತೆ. 'ನೀರು ಸೋರಿಕೆಯಾದ ಸ್ಥಳದಲ್ಲಿ ಕ್ಲೋರಿನ್ ಮತ್ತು ಫ್ಲೋರೈಡ್ ರಾಸಾಯನಿಕಗಳು ಇದ್ದೇ ಇರುತ್ತವೆ. ನೀರು ಪೂರೈಕೆ ಜಾಲದಗುಂಟ ಹೀಗೆ ಈ ರಾಸಾಯನಿಕಗಳು ಹೆಚ್ಚಿನ ಪ್ರಮಾಣದಲ್ಲಿ ಸಾಂದ್ರಗೊಂಡ ಸ್ಥಳಗಳನ್ನು ಸೂಕಿ ತನ್ನ ವಾಸನೆಗ್ರಹಣ ಶಕ್ತಿಯಿಂದ ಪತ್ತೆ ಹಚ್ಚುತ್ತಾಳೆ. ತಕ್ಷಣ ಆ ಸ್ಥಳದಲ್ಲಿ ಗುಂಡಿ ತೋಡಿ, ಪೈಪ್ ದುರಸ್ತಿಗೊಳಿಸಿ, ಸೋರಿಕೆಯನ್ನು ತಡೆಗಟ್ಟಲಾಗುತ್ತದೆ' ಎಂದು ಸೆಬಾಸ್ಟಿಯನ್ ವಿವರಿಸುತ್ತಾರೆ.

ಸೂಕಿ, ಬೆಳಿಗ್ಗೆ ತಿಂಡಿ ಮುಗಿಸಿ ಬೀಟ್‌ಗೆ ಹೊರಟರೆ ಮುಗಿಯಿತು, ಸಂಜೆವರೆಗೆ ಬಿಡುವಿಲ್ಲದಂತೆ ಕೆಲಸ ಮಾಡುತ್ತಾಳೆ. ಮಧ್ಯೆ, ಪಾಲಿಕೆಯ ವಾಹನದಲ್ಲೇ ಊಟ ಮಾಡಿ, ಲಘು ವಿಶ್ರಾಂತಿ ಪಡೆಯುತ್ತಾಳೆ. ಅವಳು ತೋರಿಸಿದ ಪ್ರತೀ ಜಾಗದಲ್ಲೂ ಸೋರಿಕೆ ಪತ್ತೆಯಾಗಿದೆ. ಅವಳ ಗ್ರಹಣಶಕ್ತಿ ಅಷ್ಟೊಂದು ಕರಾರುವಾಕ್ಕು ಎನ್ನುವುದು ಅವಳ ನಿತ್ಯದ ಕೆಲಸ ಕಂಡ ಸಿಬ್ಬಂದಿಯ ಮಾತು. ಜರ್ಮನ್ ವೈರ್‌ಹೇರ್ಡ್ ಪಾಯಿಂಟರ್ ಜಾತಿಗೆ ಸೇರಿದವಳು ಸೂಕಿ. ಯೂರೋಪಿನಾದ್ಯಂತ ಜರ್ಮನ್ ವೈರ್‌ಹೇರ್ಡ್ ಪಾಯಿಂಟರ್ ಎಂದರೆ ಬೇಟೆಗೆ ಹೆಸರಾದ ಪ್ರಸಿದ್ಧ ತಳಿ ನಾಯಿ. ಕಾಡಿನಲ್ಲಿ ಯಾವುದೇ ಪ್ರಾಣಿ ಸಂಚರಿಸಿದರೂ ಕ್ಷಣಮಾತ್ರದಲ್ಲಿ ಅವುಗಳನ್ನು ಈ ತಳಿಯ ನಾಯಿಗಳು ಗುರುತಿಸಲು ಸಮರ್ಥವಾಗಿರುತ್ತವಂತೆ. ಪಕ್ಷಿಗಳನ್ನು ಹಿಡಿಯುವಲ್ಲಿಯೂ ಇವುಗಳು ಮುಂದಂತೆ. ಈ ಪ್ರಭೇದದ ಹೆಗ್ಗುರುತಾಗಿರುವ ಚುರುಕುತನ, ಗ್ರಹಣಶಕ್ತಿಯೇ ಸೂಕಿ ನೆರವಿಗೆ ಬಂದಿದ್ದೆಂದೂ ಹೀಗಾಗಿ ಸೂಕಿ ಸಹ ಸ್ಯಾಂಟಿಯಾಗೊ ನೆರವಿಗೆ ನಿಂತಿದ್ದೆಂದೂ ಸೆಬಾಸ್ಟಿಯನ್ ನಗುತ್ತಾ ಹೇಳುತ್ತಾರೆ.

ಸೂಕಿ ಎಂತಹ ಬಲಶಾಲಿ ಎಂದರೆ ರಕ್ತ ಹೆಪ್ಪುಗಟ್ಟಿಸುವಂತಹ ತಣ್ಣನೆಯ ನೀರಿನಲ್ಲೂ ಮೈಲುಗಟ್ಟಲೆ ಈಸಬಲ್ಲಳು. ಪಕ್ಷಿ ಶಿಕಾರಿಯಲ್ಲಿ ಬೇಟೆಗಾರನಿಗೆ ನೆರವಾಗಬಲ್ಲಳು. ಎಂತಹ ಕಠಿಣ ತರಬೇತಿಗೂ ಬಹುಬೇಗ ಒಗ್ಗಿಕೊಳ್ಳಬಲ್ಲಳು. ಹೀಗಾಗಿ ಅವಳು ಎಲ್ಲರಿಗೂ ಕಣ್ಮಣಿ. ನೀರು ಉಳಿಸುವ ರಾಯಭಾರಿ. ಸೂಕಿಯು ಓಣಿ, ಓಣಿ ಬಿಡದಂತೆ ಸುತ್ತುವುದು ಮತ್ತು ಸೋರಿಕೆಯನ್ನು ತೋರಿಸುವುದು ನಿತ್ಯದ ನೋಟವಲ್ಲ? ಹೀಗಾಗಿ ನಗರದ ಬಹುಪಾಲು ನಾಗರಿಕರು ಈಕೆಯಿಂದ ನೀರು ಉಳಿಸುವ ಪಾಠವನ್ನು ಕಲಿತಿದ್ದಾರಂತೆ. ಮನೆಯ ಸೋರುವ ತೊಟ್ಟಿಗಳು ಸಹ ಇವಳ ಓಡಾಟದ ಕಾರಣದಿಂದ ಬದಲಾಗಿವೆ ಗೊತ್ತೆ ಎಂದು ಅಧಿಕಾರಿಗಳು ಕೇಳುತ್ತಾರೆ. ಹೀಗಾಗಿ ಸೂಕಿ ಈಗ ಸಾಧಕಿಯಂತೆ ಕಂಗೊಳಿಸುತ್ತಾಳೆ.

ನಮ್ಮ ಬೆಂಗಳೂರಿನಲ್ಲೂ ನೀರು ಪೂರೈಕೆ ಪೈಪುಗಳು ಸಿಕ್ಕಾಪಟ್ಟೆ ಸೋರಿಕೆ ಆಗುತ್ತಿವೆ. ನೂರಾರು ಕಿಲೋಮೀಟರ್ ದೂರದಿಂದ ಪಂಪ್ ಮಾಡಿ, ತರಲಾದ ನೀರು ಪೋಲಾಗುತ್ತಿದೆ. ಸ್ಯಾಂಟಿಯಾಗೊ ಸ್ವರೂಪದಲ್ಲೇ ಈ ಬಾರಿ ನೀರಿನ ತೀವ್ರ ಬರವನ್ನು ಅನುಭವಿಸಿದೆ ಈ ಊರು. ಕೆಲವೇ ವಾರಗಳ ಹಿಂದೆ ಪಟ್ಟ ಪರಿತಾಪವನ್ನು ಮಳೆ ಸುರಿಯುತ್ತಿರುವ ಈ ದಿನಗಳಲ್ಲಿ ಮರೆತುಬಿಟ್ಟಿದ್ದಾರೆ ನಮ್ಮ ಜನ. ಮತ್ತೆ ಪೋಲಿನ ಜಾಡಿಗೆ ಬಿದ್ದಿದ್ದಾರೆ. ಅವರಲ್ಲಿ ನೀರಿನ ಕುರಿತು ಜಾಗೃತಿ ಮೂಡಿಸಲು ನಮಗೂ ಸೂಕಿಯಂತೆ ಪೋಲು ತಪ್ಪಿಸುವ ಕಾವಲುಗಾರರೊಬ್ಬರು ಬೇಕಲ್ಲವೇ? ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65